

ಗೆಳೆಯ: ನಿನ್ನ ಹಲ್ಲಿನ ರಹಸ್ಯವೇನು? ಇಷ್ಟೊಂದು ಸುಂದರವಾಗಿ ಫಳ ಫಳನೆ ಹೊಳೆಯುತ್ತಿದೆಯಲ್ಲಾ?

ಗುಂಡ: ನಾನು ನನ್ನ ಹಲ್ಲಿನ ಬಗ್ಗೆ ವಿಶೇಷ ಕಾಳಜಿ ವಹಿಸಿರುವುದೇ ಅದಕ್ಕೆ ಕಾರಣ! ಪ್ರತಿ ದಿನ ರಾತ್ರಿ ಮಲಗುವ ಮುನ್ನ ಅದನ್ನು ನೀರಿನಲ್ಲಿ ಇಡುತ್ತೇನೆ!

★★★

ಟೀಚರ್: ಒಂಟೆ ಯಾಕೆ ಮೊಟ್ಟೆ ಇಡುವುದಿಲ್ಲ?

ಗುಂಡ: ಅದು ತುಂಬಾ ಎತ್ತರವಾದ ಪ್ರಾಣಿ! ಅದು ಮೊಟ್ಟೆ ಇಟ್ಟರೆ ಬಿದ್ದು ಒಡೆದು ಹೋಗುತ್ತದೆ. ಅದಕ್ಕೆ ಇಡುವುದಿಲ್ಲ!

★★★

ಜೈಲರ್: ಇಂದು ನಿನ್ನನ್ನು ಬಿಡುಗಡೆ ಮಾಡುತ್ತಿದ್ದೇವೆ. ನಿನ್ನ ಬಟ್ಟೆಬರೆ ಎಲ್ಲವನ್ನೂ ತೆಗೆದುಕೊಂಡು ಹೋಗು.

ಖೈದಿ: ಬೇಡ ಬಿಡಿ ಸಾರ್! ಮತ್ತೆ ಇಲ್ಲಿಗೆ ಹಿಂತಿರುಗಿ ಬಂದೇ ಬರುತ್ತೇನಲ್ಲ. ಇಲ್ಲೇ ಇರಲಿ ಬಿಡಿ!

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

---

### ವ್ಯತ್ಯಾಸ

ವೆಲ್ಡಿಂಗ್ ಮತ್ತು ವೆಡ್ಡಿಂಗ್ ಗಿರುವ ವ್ಯತ್ಯಾಸವೇನು?

ವೆಲ್ಡಿಂಗ್‌ನಲ್ಲಿ ಮೊದಲು ಕಿಡಿ ಹಾರಿ ನಂತರ ಶಾಶ್ವತ ಜೋಡಣೆಯಾಗುತ್ತದೆ.

ವೆಡ್ಡಿಂಗ್‌ನಲ್ಲಿ ಮೊದಲು ಜೋಡಣೆಯಾಗಿ ನಂತರ ಜೀವನಪೂರ್ತಿ ಕಿಡಿ ಹಾರುತ್ತಿರುತ್ತದೆ...!

★★★

### ಲೆಕ್ಕಾಚಾರ

ಟೀಚರ್: ಒಬ್ಬಾಕೆ ಒಂದು ತಾಸಿನಲ್ಲಿ 50 ಚಪಾತಿಗಳನ್ನು ಮಾಡಿದರೆ ಮೂವರು ಒಂದು ತಾಸಿನಲ್ಲಿ ಎಷ್ಟು ಚಪಾತಿಗಳನ್ನು ಮಾಡಬಲ್ಲರು?

ಗೋಪಿ: ಒಂದೂ ಇಲ್ಲ.

ಟೀಚರ್: ಏನಯ್ಯಾ ನಿನಗೆ ಅಷ್ಟೂ ಲೆಕ್ಕ ತಿಳಿಯದೆ?

ಗೋಪಿ: ನನಗೆ ಲೆಕ್ಕ ತಿಳಿದಿದೆ ಸಾರ್... ಆದರೆ ನಿಮಗೆ ಮಹಿಳೆಯರ ಬಗ್ಗೆ ತಿಳಿದಿಲ್ಲವೆಂದು ಅನ್ನಿಸುತ್ತದೆ. 'ಒಬ್ಬಳೇ ಇದ್ದಾಗ ಕೆಲಸ ಮಾಡುತ್ತಾಳೆ, ಮೂವರಾದರೆ ಕೇವಲ ಹರಟೆ ಹೊಡೆಯುತ್ತಾರೆ!'

★★★



### ಪ್ರೀತಿ– ವ್ಯವಹಾರ

ಪತ್ನಿ: ಡಾರ್ಲಿಂಗ್, ನೀವು ನನ್ನನ್ನು ಎಷ್ಟು ಪ್ರೀತಿಸುತ್ತಿದ್ದೀರಿ?

ಪತಿ: 86.5%

ಪತ್ನಿ: ಯಾಕ್ರೀ, ಪೂರ್ತಿ 100% ಯಾಕಿಲ್ಲ?

ಪತಿ: ಎಲ್ಲಾ ವ್ಯವಹಾರಗಳ ಮೇಲೂ ಸರಕಾರ 13.5% ವ್ಯಾಟ್ ತೆರಿಗೆ ವಿಧಿಸಿದೆ ಕಣೇ!

★★★

### ವಿಶಾಲತೆ!

ಸ್ತ್ರೀಯರೆಂದೂ ತಮ್ಮ ಪತಿಯ ತಂಗಿಯೊಂದಿಗೆ ಪ್ರೇಮಪೂರ್ವಕವಾಗಿ ವ್ಯವಹರಿಸುವುದಿಲ್ಲ.

ಆದರೆ ಪುರುಷರು ತಮ್ಮ ಪತ್ನಿಯ ತಂಗಿಯೊಂದಿಗೆ ಸದಾ ಪ್ರೇಮಪೂರ್ವಕವಾಗಿ ವ್ಯವಹರಿಸುತ್ತಾರೆ!

'ಮನಸ್ಸು ವಿಶಾಲವಾಗಿರಬೇಕೆನ್ನುವುದು ಪುರುಷರ ವಾದ!'

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

---

